# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 11/ಸಭೆ/ಪಿಆರ್/03/2020-21 ದಿನಾಂಕ : 07/11/2020

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ, ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ಕುವೆಂಪುನಗರಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ 11 ಕುವೆಂಪುನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 07/11/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಪ್ರಸನ್ನ ವೆಂಕಟೇಶ್, ನೋಡಲ್ ಅಧಿಕಾರಿ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಮೇಘನಾ, ವೈದ್ಯಾಧಿಕಾರಿ
4. ಶ್ರೀ ನಾರಾಯಣ ಸ್ವಾಮಿ, ಸ.ಅ, ಬಿಡಬ್ಲ್ಯೂಎಸ್ಎಸ್‌ಬಿ
5. ಶ್ರೀ ನಾರಾಯಣ ಸ್ವಾಮಿ. ಲೈವ್ ಸ್ಟಾಕ್ ಆಫೀಸರ್
6. ಶ್ರೀಮತಿ ರಮ್ಯ, ಕಂದಾಯ ಪರಿವೀಕ್ಷಕರು
7. ಶ್ರೀಮತಿ ಕಾಂತಮಣಿ, ಕಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ಶಿವಶಂಕರ್, ಟ್ರಾಫಿಕ್ ಇನ್ಸ್‌ಪೆಕ್ಟರ್
9. ಶ್ರೀ ಬಿ.ಆರ್ ಯಾದವ್, ಮಾರ್ಷಲ್

ಹಾಜರಿದ್ದ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು

1. ಶ್ರೀ ವಿನೋದಾನಂದ, ಪ್ರಕೃತಿ ಲೇಔಟ್
2. ಶ್ರೀ ಮಾರಪ್ಪ, ಗಣೇಶ ಲೇಔಟ್
3. ಶ್ರೀ ಗುರುಪ್ರಸಾದ್, ಸಿಂಗಾಪುರ ಪ್ಯಾರಡೈಸ್

ಶ್ರೀ ಸೋಮನಾಥ್ ಎಸ್ ಜಾಧವ್, ಕಾರ್ಯದರ್ಶಿ ಹಾಗೂ ಸಂಚಾಲಕರು:- ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ಶ್ರೀ ವಿನೋದಾನಂದ:- ಪ್ರಕೃತಿ ಬಡಾವಣೆಯ ರಸ್ತೆಗಳಲ್ಲಿ ಚರಂಡಿ ಕಾಮಗಾರಿ ಅಪೂರ್ಣವಾಗಿರುವುದರಿಂದ ಪೂರ್ಣಗೊಳಿಸಲು ಕೋರಿದರು.

ಮಾರಪ್ಪ :- ಗಣೇಶ ಬಡಾವಣೆಯಲ್ಲಿ ಅಡ್ಡರಸ್ತೆಗಳು ಹಾಗೂ ಮುಖ್ಯ ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಕೋರಿರುತ್ತಾರೆ.

ಶ್ರೀ ಗೋವಿಂದರಾಜು :- ಕುವೆಂಪುನಗರ 2ನೇ ಹಂತ ಗಣೇಶ ದೇವಸ್ಥಾನದ ಹತ್ತಿರ ಅಡ್ಡರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸಲು, ಸರ್ಕಾರಿ ಶಾಲೆ ಮುಂಭಾಗದಲ್ಲಿರುವ ರಸ್ತೆಯನ್ನು ದುರಸ್ಥಿಪಡಿಸಲು ಹಾಗೂ ಕೊಳವೆ ಬಾವಿಗಳ ಮೋಟಾರ್‌ಗಳನ್ನು ದುರಸ್ಥಿಪಡಿಸಲು ಕೋರಿದರು.

Scanned by CamScanner

ಶ್ರೀ ಗುರುಪ್ರಸಾದ್ :- ಸಿಂಗಾಪುರ ಪ್ಯಾರಡೈಸ್ ವ್ಯಾಪ್ತಿಯಲ್ಲಿ ಪ್ರಾಣಿ ತ್ಯಾಜ್ಯವನ್ನು ಹಾಕುತ್ತಿರುವುದರಿಂದ ಇಲ್ಲಿನ ನಿವಾಸಿಗಳಿಗೆ ವಾಸನೆ ಬರುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರಿಂದ ಸದರಿ ಪ್ರಾಣಿ ತ್ಯಾಜ್ಯವನ್ನು ವೈಜ್ಞಾನಿಕ ಮಾದರಿಯಲ್ಲಿ ನಿರ್ವಹಿಸಲು ಹಾಗೂ ಸದರಿ ಸ್ಥಳದಲ್ಲಿ ಪ್ರಾಣಿ ತ್ಯಾಜ್ಯವನ್ನು ಹಾಕದಂತೆ ಕ್ರಮ ವಹಿಸಲು ಕೋರಿದರು ಹಾಗೂ ಉದ್ಯಾನವನ್ನು ಸ್ವಚ್ಛಗೊಳಿಸಲು, ಉದ್ಯಾನವನದಲ್ಲಿರುವ ಗಿಡಗಳಿಗೆ ನೀರುಣಿಸಲು, ವಿದ್ಯುತ್ ದೀಪಗಳನ್ನು ಅಳವಡಿಸಲು ಕೋರಿದರು, ಒತ್ತುವರಿ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಹಾಗೂ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸುತ್ತಿರುವುದಾಗಿ ಹಾಗೂ ಬಯೋಮೆಥೆನೈಜೇಷನ್ ಪ್ಲಾಂಟ್‌ನಿಂದ ಹೊರ ಬರುವ ಹೊಗೆಯಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ಸರಿಪಡಿಸಲು ಕೋರಿದರು.

ಶ್ರೀ ನಾಗರಾಜು ಎಸ್.ಎಂ :- ಸಿಂಗಾಪುರ ಕೆರೆಗೆ ತ್ಯಾಜ್ಯ ಹಾಕದಂತೆ ಮಾರ್ಷಲ್‌ರನ್ನು ನಿಯೋಜಿಸಿ ಸಿಂಗಾಪುರ ಕೆರೆ ಸುತ್ತಲೂ ತಂತಿ ಬೇಲಿ ಅಳವಡಿಸಲು, ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸ ಹಾಕದಂತೆ ನೋಡಿಕೊಳ್ಳಲು ಮಾರ್ಷಲ್‌ಗಳನ್ನು ನಿಯೋಜಿಸಲು ಹಾಗೂ ಅನಧಿಕೃತವಾಗಿ ಕೊಳವೆ ಬಾವಿ ಕೊರಸದಂತೆ ಕ್ರಮ ವಹಿಸಲು, ಗಂಗಮ್ಮ ಗುಡಿ ಸರ್ಕಲ್ ನಿಂದ ಕುವೆಂಪುನಗರದವರೆಗೆ, ಸಿಂಗಾಪುರದಿಂದ ಅಬ್ಬೀಗೆರೆ ರಸ್ತೆವರೆಗೆ ಹಾಗೂ ಅವೇಕ್ಷ ಆಸ್ಪತ್ರೆಯಿಂದ ಕಾನ್ಸಿರಾಂ ನಗರದವರೆಗೆ ಇರುವ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿದರು

ಶ್ರೀ ಮಹಂತೇಶ್ :- ಪೌರಕಾರ್ಮಿಕರಿಗೆ ಹೊಸದಾಗಿ ಶೌಚಾಲಯ ಹಾಗೂ ಸಮವಸ್ತ್ರ ಬದಲಾಯಿಸಲು ಕೊಠಡಿ ನಿರ್ಮಿಸಲು ಕೋರಿದರು.

ಶ್ರೀಮತಿ ಮೇಘನಾ :- ಕೋವಿಡ್ -19 ಗೆ ಸಂಬಂಧಿಸಿದಂತೆ ರೋಗದ ಸೋಂಕಿಗೆ ತುತ್ತಾದ ವ್ಯಕ್ತಿಗಳನ್ನು ಸಕಾಲದಲ್ಲಿ ಗುರುತಿಸಿ ಚಿಕಿತ್ಸೆ ನೀಡುವುದು ಹಾಗೂ ಸೋಂಕಿತ ವ್ಯಕ್ತಿಯ ಕುಟುಂಬದ ಸದಸ್ಯರು ಮತ್ತು ಆತನ ಸಹೋದ್ಯೋಗಿಗಳಿಗೆ ಸೋಂಕು ಹರಡದಂತೆ ಮುಂಜಾಗ್ರತೆ ಕ್ರಮ ವಹಿಸಲು, ರೋಗ ಹರಡುವುದನ್ನು ನಿಯಂತ್ರಿಸಲು ಹಾಗೂ ರೋಗ ವ್ಯಾಪಿಸುವ ಸರಪಳಿಯನ್ನು ಬೇರ್ಪಡಿಸಲು ಪ್ರತಿಯೊಬ್ಬ ನಾಗರೀಕರು ಕೋವಿಡ್ 19 ಪರೀಕ್ಷೆಗೆ ಒಳಪಡುವುದು ಅವಶ್ಯಕವಾಗಿರುತ್ತದೆಂದು ಜನರಲ್ಲಿ ಅರಿವು ಮೂಡಿಸುವುದರ ಜೊತೆಗೆ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರಿಗೆ ಸಹಕಾರ ನೀಡಲು ಕೋರಿದರು.

ಶ್ರೀ ಪ್ರಸನ್ನವೆಂಕಟೇಶ್, ಸ.ಕಾ.ಅ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ವಿವರವಾಗಿ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

09/11/20

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 11, ಕುವೆಂಪುನಗರ

09/11/2020
ನೋಡಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು

Scanned by CamScanner